I/247963/2022

# ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/64/ಸಿಡಿಸಿ(2)/2022

ಆಯುಕ್ತರವರ ಕಛೇರಿ
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ
ಬೆಂಗಳೂರು-01
ದಿನಾಂಕ:21/04/2022

**-: ಸುತ್ತೋಲೆ :-**

| | |
|---|---|
| **ವಿಷಯ:-** | ಸರ್ಕಾರಿ / ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವರ್ಗದವರು ಕೈಗಾರಿಕಾ / ವೃತ್ತಿ ತರಬೇತಿ ಪಡೆಯುವ ಬಗ್ಗೆ. |
| **ಉಲ್ಲೇಖ** | 1.AICTE ಅಧಿಸೂಚನೆ, ದಿನಾಂಕ : 01-03-2019<br>2.ಸರ್ಕಾರದ ಪತ್ರ ಸಂಖ್ಯೆ: ED 12 DTE 2019, ದಿನಾಂಕ:24-03-2020<br>3.ಇಂಜಿನಿಯರಿಂಗ್ ಕಾಲೇಜು ಸಮಿತಿಯ ವರದಿ,<br>ದಿನಾಂಕ: 06-07-2021 |

*********

ಮೇಲ್ಕಂಡ ವಿಷಯಕ್ಕೆ ಸಂಬಂಧ ಪಟ್ಟಂತೆ ಎಐಸಿಟಿಇ 7 ನೇ ವೇತನ ಶ್ರೇಣಿ ಗೆಜೆಟ್ ಅಧಿಸೂಚನೆ ಪತ್ರದನ್ವಯ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವರ್ಗದವರ ಪದೋನ್ನತಿಗಾಗಿ ಕೈಗಾರಿಕಾ / ವೃತ್ತಿ ತರಬೇತಿಗಳನ್ನು ಕಾಲ ಕಾಲಕ್ಕೆ ಪಡೆಯುವುದು ಕಡ್ಡಾಯವಾಗಿರುತ್ತದೆ. ಬೋಧಕ ಸಿಬ್ಬಂದಿ ವರ್ಗದವರು ತಮ್ಮ ವೃತ್ತಿಯಲ್ಲಿ ಕೈಗಾರಿಕಾ ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕವನ್ನು ಕಾಯ್ದುಕೊಳ್ಳುವುದು ಹಾಗೂ ನಿರಂತರ ಕಲಿಕೆ, ಕೌಶಲ್ಯ ಹೆಚ್ಚಿಸಿಕೊಳ್ಳುವ ಅವಶ್ಯಕತೆಯಿದೆ. ಆದಕಾರಣ, ಉಲ್ಲೇಖಿತ ಪತ್ರಗಳನ್ವಯ, ಬೋಧಕ ವರ್ಗದವರುಗಳನ್ನು ಕೈಗಾರಿಕಾ ತರಬೇತಿಗಳಿಗೆ ನಿಯೋಜಿಸಲು ಈ ಕೆಳಕಂಡ ನಿಯಮ/ಅಂಶಗಳನ್ನು ಅನುಸರಿಸುವಂತೆ ಸೂಚಿಸಲಾಗಿದೆ.

1. ಇಂಜಿನಿಯರಿಂಗ್ ಕಾಲೇಜು ಬೋಧಕ ಸಿಬ್ಬಂದಿಯವರಿಗೆ ಪದೋನ್ನತಿಗೆ 2 ವಾರಗಳ ಕೈಗಾರಿಕಾ / ವೃತ್ತಿ ತರಬೇತಿ ಕಡ್ಡಾಯವಾಗಿರುತ್ತದೆ.
2. ಬೋಧಕ ಸಿಬ್ಬಂದಿ ವರ್ಗದವರಿಗೆ ಅವಶ್ಯಕವಾಗಿರುವ 2 ವಾರಗಳ ಅವಧಿಯ ಕೈಗಾರಿಕಾ ತರಬೇತಿಯನ್ನು ಸಂಪೂರ್ಣವಾಗಿ ಒಂದೇ ಬಾರಿ ಅಥವಾ ಪ್ರತ್ಯೇಕ ಅವಧಿಗಳಲ್ಲಿ (1+1 ವಾರಗಳ) ತಮ್ಮದೇ ವಿಭಾಗಕ್ಕೆ ಸಂಬಂಧಪಟ್ಟ ಅಥವಾ ಅಂತರ ವಿಭಾಗ(interdisciplinary)ಕ್ಕೆ ಸಂಬಂಧ ಪಟ್ಟ ವಿಷಯದಲ್ಲಿ ತರಬೇತಿ ಪಡೆಯಬಹುದು.

3. ದೈನಂದಿನ ಶೈಕ್ಷಣಿಕ ಕಾರ್ಯಗಳಿಗೆ ತೊಂದರೆ ಆಗದಂತೆ ಕೈಗಾರಿಕಾ/ ವೃತ್ತಿ ತರಬೇತಿಯನ್ನು ಪಡೆಯಲು ಯೋಜಿಸಬೇಕು ಮತ್ತು ಬಡ್ತಿಗೆ ಕಾಲ ಮಿತಿ ಕಡಿಮೆ ಇರುವಂತಹ ಬೋಧಕ ಸಿಬ್ಬಂದಿ ವರ್ಗದವರಿಗೆ ಜೇಷ್ಠತೆಯ ಆಧಾರದ ಮೇಲೆ ಆದ್ಯತೆ ನೀಡಬೇಕು.
4. ಕೈಗಾರಿಕಾ/ ವೃತ್ತಿ ತರಬೇತಿಯನ್ನು ಬೋಧಕ ಸಿಬ್ಬಂದಿಯವರು ಪಡೆಯಲು ಕೈಗಾರಿಕೆ/ ಹೊರಾಂಗಣ ಕಾರ್ಯ / ಸಂಶೋದನ ಕೇಂದ್ರಗಳನ್ನು ಗುರುತಿಸಿಕೊಂಡು ತರಬೇತಿಗೆ ಅವಶ್ಯಕವಿರುವ ಅನುಮತಿ ಪತ್ರವನ್ನು ಕೈಗಾರಿಕೆ /ಸಂಸ್ಥೆಯಿಂದ ಪಡೆದುಕೊಳ್ಳಬೇಕು.
5. ಕೈಗಾರಿಕಾ / ವೃತ್ತಿ ತರಬೇತಿಯನ್ನು ಪಡೆಯುವ ಸ್ಥಳ, ವಿಷಯ, ಮಾರ್ಗದರ್ಶಕರ ಮಾಹಿತಿ ಮತ್ತು ದಿನಾಂಕದ ವಿವರಗಳೊಂದಿಗೆ ಅಧ್ಯಾಪಕರು ಸಲ್ಲಿಸಿದ ಮನವಿಯನ್ನು ಪ್ರಾಂಶುಪಾಲರು ಸಂಸ್ಥೆಯಲ್ಲಿರುವ IQAC ಘಟಕದ ಶಿಫಾರಸ್ಸಿನೊಂದಿಗೆ ಸದರಿ ಮನವಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಮತ್ತು ಸೂಕ್ತ ಶಿಫಾರಸ್ಸಿನೊಂದಿಗೆ ಇಲಾಖೆಯ ಅನುಮತಿಗಾಗಿ ಕಳುಹಿಸಿಕೊಡಬೇಕು.
6. ಇಲಾಖೆಯ ಅನುಮತಿ ಪಡೆದ ನಂತರವೇ ಅಧ್ಯಾಪಕರನ್ನು ಕೈಗಾರಿಕಾ / ವೃತ್ತಿ ತರಬೇತಿಗೆ ಬಿಡುಗಡೆಗೊಳಿಸಬೇಕು.
7. ತರಬೇತಿಯನ್ನು ಪೂರ್ಣಗೊಳಿಸಿದ ನಂತರ ಬೋಧಕ ಸಿಬ್ಬಂದಿಯವರು, ಉದ್ಯಮ ಮತ್ತು ಸಂಸ್ಥೆಗೆ ಅವರ ಕೊಡುಗೆಯ ಬಗ್ಗೆ ವಿವರವಾದ ವರದಿ ಮತ್ತು ತರಬೇತಿ ಪ್ರಮಾಣಪತ್ರವನ್ನು ಪ್ರಾಂಶುಪಾಲರಿಗೆ ಸಲ್ಲಿಸುವುದು.
8. ಅಧ್ಯಾಪಕರು ಕೇಂದ್ರ/ರಾಜ್ಯ ಸರ್ಕಾರ/ಸರ್ಕಾರಿ ಸಂಸ್ಥೆಗಳು/ ಹಾಗೂ CIA /FICCI /FKCCI / NASSCOM / DIC / CREDAI / BCIC/ICFAI /DRTC /RIE/UDYOG BHARAT ನೋಂದಾಯಿತ ಸಾರ್ವಜನಿಕ ವಲಯ /ಖಾಸಗಿ ಲಿಮಿಟೆಡ್ ಕಂಪನಿಗಳು/ಸ್ವಾಮ್ಯ ಸಂಸ್ಥೆಗಳಲ್ಲಿ ಮತ್ತು NITTTR ಕೇಂದ್ರಗಳು, CSIR ಹಾಗೂ NAL, DRDO, ISRO, BEL, CPRI, HAL, CMTI, GTTC, BSNL, CDAC, NIC, NTTF, Indian Railways, KREDL ಸಂಬಂಧಿಸಿದ ಸಂಶೋದನ ಕೇಂದ್ರಗಳು ಮತ್ತು ಖಾಸಗಿ ಸಂಶೋದನ ಕೇಂದ್ರಗಳು ನಡೆಸುವ ತರಬೇತಿಗಳು ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳ ಸಹಯೋಗದೊಂದಿಗೆ Centre's of excellence(BIOCON,SAMSUNG,TECH MAHINDRA, WIPRO, BOSH etc) ಕೇಂದ್ರಗಳಲ್ಲಿ ನಡೆಸಲ್ಪಡುವ ತರಬೇತಿಗಳನ್ನು ಪಡೆಯಬಹುದು

ಕೈಗಾರಿಕಾ / ವೃತ್ತಿ ತರಬೇತಿ ಅವಶ್ಯಕವಿರುವ ಎಲ್ಲಾ ಬೋಧಕ ವರ್ಗದವರು ಮೇಲಿನ ಸೂಚನೆಗಳನ್ನು ಪಾಲಿಸಿ ಕಾಲಕಾಲಕ್ಕೆ ತರಬೇತಿಯನ್ನು ಪಡೆಯಬೇಕೆಂದು ತಿಳಿಸಲಾಗಿದೆ.

ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.

ಜಂಟಿ ನಿರ್ದೇಶಕರು(ಸಿಡಿಸಿ).

ಇವರಿಗೆ:

1. ಎಲ್ಲಾ ಸರ್ಕಾರಿ / ಅನುದಾನಿತ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲರು ಮತ್ತು ಬೋಧಕ ವರ್ಗದವರಿಗೆ ಮಾಹಿತಿಗಾಗಿ.
2. ಇ-ಆಡಳಿತ ವಿಭಾಗಕ್ಕೆ -ವೆಬ್ ಸೈಟ್ ನಲ್ಲಿ ಪ್ರಚುರ ಪಡಿಸಲು.